# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:–** ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಇತರ
ಸಂಬಂಧಿತ ಆದೇಶಗಳು

**ಆದೇಶ ಸಂಖ್ಯೆ: ಎಫ್‌ಡಿ 7 ಎಸ್‌ಆರ್‌ಪಿ 2012,**
**ಬೆಂಗಳೂರು, ದಿನಾಂಕ 21ನೇ ಏಪ್ರಿಲ್ 2012**

1.1 ಅಧಿಕಾರಿ ವೇತನ ಸಮಿತಿ 2011 ವೇತನ ಮತ್ತು ಭತ್ಯೆಗಳ ಕುರಿತು ಮಾಡಿರುವ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿಕೊಂಡಿರುತ್ತದೆ.

1.2 ಸರ್ಕಾರವು ಈಗ ಈ ಮುಂದಿನ ಆದೇಶಗಳನ್ನು ಹೊರಡಿಸಲು ಹರ್ಷಿಸುತ್ತದೆ.

2. **ಮುಖ್ಯ ವೇತನ ಶ್ರೇಣಿ:**

**2.1 ಪ್ರಸಕ್ತ ಮುಖ್ಯ ವೇತನ ಶ್ರೇಣಿಯನ್ನು ಈ ಕೆಳಗೆ ನಿರ್ದಿಷ್ಟಪಡಿಸಿರುವಂತೆ ಪರಿಷ್ಕರಿಸಲಾಗಿದೆ.**

| ಪ್ರಸಕ್ತ ಮುಖ್ಯ ವೇತನ ಶ್ರೇಣಿ | ಪರಿಷ್ಕೃತ ಮುಖ್ಯ ವೇತನ ಶ್ರೇಣಿ |
|---|---|
| ರೂ.4800–100–6000–125–6500–150–7100–175–7800–200–8600–225–9500–250–10500–300–12300–350–14400–400–16800–450–19500–525–22650–600–26250–675–30300–750–34800–850–39900 | ರೂ.9600–200–12000–250–13000–300–14200–350–15600–400–17200–450–19000–500–21000–600–24600–700–28800–800–33600–900–39000–1050–45300–1200–52500–1350–60600–1500–69600–1700–79800 |

**2.2 ಪರಿಷ್ಕೃತ ವೇತನ ಶ್ರೇಣಿಗಳು:**

ಪ್ರಸಕ್ತ ವೇತನ ಶ್ರೇಣಿಗಳನ್ನು ಈ ಮುಂದೆ ನಿರ್ದಿಷ್ಟಪಡಿಸಿರುವಂತೆ ಪರಿಷ್ಕರಿಸಲಾಗಿದೆ.

| ಕ್ರಮ ಸಂಖ್ಯೆ | ಪ್ರಸಕ್ತ ವೇತನ ಶ್ರೇಣಿಗಳು ರೂ. | ಪರಿಷ್ಕೃತ ವೇತನ ಶ್ರೇಣಿಗಳು ರೂ. |
|---|---|---|
| 1 | 4800–100–6000–125–6500–150–7100–175–7275 | 9600–200–12000–250–13000–300–14200–350–14550 |
| 2 | 5200–100–6000–125–6500–150–7100–175–7800–200–8200 | 10400–200–12000–250–13000–300–14200–350–15600–400–16400 |
| 3 | 5500–100–6000–125–6500–150–7100–175–7800–200–8600–225– | 11000–200–12000–250–13000–300–14200–350–15600–400–17200–450– |

| | | |
|---|---|---|
| | 9500 | 19000 |
| 4 | 5800–100–6000–125–6500–150–7100–175–7800–200–8600–225–9500–250–10500 | 11600–200–12000–250–13000–300–14200–350–15600–400–17200–450–19000–500–21000 |
| 5 | 6250–125–6500–150–7100–175–7800–200–8600–225–9500–250–10500–300–12000 | 12500–250–13000–300–14200–350–15600–400–17200–450–19000–500–21000–600–24000 |
| 6 | 6800–150–7100–175–7800–200–8600–225–9500–250–10500–300–12300–350–13000 | 13600–300–14200–350–15600–400–17200–450–19000–500–21000–600–24600–700–26000 |
| 7 | 7275–175–7800–200–8600–225–9500–250–10500–300–12300–350–13350 | 14550–350–15600–400–17200–450–19000–500–21000–600–24600–700–26700 |
| 8 | 8000–200–8600–225–9500–250–10500–300–12300–350–14400–400–14800 | 16000–400–17200–450–19000–500–21000–600–24600–700–28800–800–29600 |
| 9 | 8825–225–9500–250–10500–300–12300–350–14400–400–16000 | 17650–450–19000–500–21000–600–24600–700–28800–800–32000 |
| 10 | 9500–250–10500–300–12300–350–14400–400–16800–450–17250 | 19000–500–21000–600–24600–700–28800–800–33600–900–34500 |
| 11 | 10000–250–10500–300–12300–350–14400–400–16800–450–18150 | 20000–500–21000–600–24600–700–28800–800–33600–900–36300 |
| 12 | 10800–300–12300–350–14400–400–16800–450–19500–525–20025 | 21600–600–24600–700–28800–800–33600–900–39000–1050–40050 |
| 13 | 11400–300–12300–350–14400–400–16800–450–19500–525–21600 | 22800–600–24600–700–28800–800–33600–900–39000–1050–43200 |
| 14 | 12000–300–12300–350–14400–400–16800–450–19500–525–22650 | 24000–600–24600–700–28800–800–33600–900–39000–1050–45300 |
| 15 | 13000–350–14400–400–16800–450–19500–525–22650–600–23850 | 26000–700–28800–800–33600–900–39000–1050–45300–1200–47700 |
| 16 | 14050–350–14400–400–16800–450–19500–525–22650–600–25050 | 28100–700–28800–800–33600–900–39000–1050–45300–1200–50100 |
| 17 | 15200–400–16800–450–19500–525–22650–600–25650 | 30400–800–33600–900–39000–1050–45300–1200–51300 |
| 18 | 16400–400–16800–450–19500–525–22650–600–26250 | 32800–800–33600–900–39000–1050–45300–1200–52500 |
| 19 | 18150–450–19500–525–22650–600– | 36300–900–39000–1050–45300–1200– |

| | | |
|---|---|---|
| | 26250–675–26925 | 52500–1350–53850 |
| 20 | 19050–450–19500–525–22650–600–26250–675–27600 | 38100–900–39000–1050–45300–1200–52500–1350–55200 |
| 21 | 20025–525–22650–600–26250–675–28275 | 40050–1050–45300–1200–52500–1350–56550 |
| 22 | 22125–525–22650–600–26250–675–30300 | 44250–1050–45300–1200–52500–1350–60600 |
| 23 | 24450–600–26250–675–30300–750–31800 | 48900–1200–52500–1350–60600–1500–63600 |
| 24 | 26250–675–30300–750–34800–850–36500 | 52500–1350–60600–1500–69600–1700–73000 |
| 25 | 28275–675–30300–750–34800–850–39900 | 56550–1350–60600–1500–69600–1700–79800 |

2.3 ಪರಿಷ್ಕೃತ ವೇತನ ಶ್ರೇಣಿಗಳು ಔದ್ಯಮಿಕ ಕೆಲಸಗಾರರ ಅಖಿಲ ಭಾರತ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ (ಸಾಮಾನ್ಯ) (ಆಧಾರ ವರ್ಷ 2001=100) ಸಂಖ್ಯೆಗಳಲ್ಲಿ 191.50 ಅಂಶಗಳ ಸೂಚ್ಯಂಕ ಸರಾಸರಿಯಿಂದ ನಿರೂಪಿಸಲಾದ ಜೀವನ ಪರಿಸ್ಥಿತಿ ವೆಚ್ಚಕ್ಕೆ ಸಂಬಂಧಿಸಿದೆ.

2.4 ಪರಿಷ್ಕೃತ ವೇತನ ಶ್ರೇಣಿಗಳು ಮುಖ್ಯ ವೇತನ ಶ್ರೇಣಿ ರೂ. 9600–200–12000–250–13000–300–14200–350–15600–400–17200–450–19000–500–21000–600–24600–700–28800–800–33600–900–39000–1050–45300–1200–52500–1350–60600–1500–69600–1700–79800 ರ ನಿರ್ದಿಷ್ಟ ಭಾಗಗಳಾಗಿವೆ.

2.5 2012ರ ಏಪ್ರಿಲ್ 1 ರಿಂದ ಮೊದಲ್ಗೊಂಡು, ಯಾವುದೇ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯು ಮೇಲಿನ ಕಂಡಿಕೆ 2.2 ರ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದಂತೆ ಅದಕ್ಕೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿಯ ಎದುರಿಗೆ ತೋರಿಸಲಾದಂತೆ ಅದೇ ಕಂಡಿಕೆಯ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪರಿಷ್ಕೃತ ವೇತನ ಶ್ರೇಣಿಯಾಗಿರತಕ್ಕದ್ದು.

**3. ಜಾರಿಗೆ ಬರುವ ದಿನಾಂಕ:**

3.1 ಪರಿಷ್ಕೃತ ವೇತನ ಶ್ರೇಣಿಗಳು 2012ರ ಏಪ್ರಿಲ್ 1 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು. ವೇತನ ಶ್ರೇಣಿಗಳ ಪರಿಷ್ಕರಣೆಯ ಆರ್ಥಿಕ ಸೌಲಭ್ಯವು 1ನೇ ಏಪ್ರಿಲ್ 2012 ರಿಂದ ಲಭ್ಯವಾಗುತ್ತದೆ.

**4. ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿ:**

4.1 ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಈ ಮುಂದಿನ ವಿಧಾನದಲ್ಲಿ ನಿಗದಿಪಡಿಸತಕ್ಕದ್ದು.

(i) ಮೂಲ ವೇತನದ ಶೇಕಡ 22.5 ರಷ್ಟು ಮೊಬಲಗನ್ನು ಸರ್ಕಾರಿ ನೌಕರನ ಈಗಿನ 'ಉಪಲಬ್ಧಿಗೆ' ಸೇರಿಸತಕ್ಕದ್ದು. (ಇದರಲ್ಲಿ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 39 ಎಸ್‌ಆರ್‌ಪಿ 2011 ದಿನಾಂಕ 18–11–2011ರಲ್ಲಿ ಮಂಜೂರು ಮಾಡಿದ ಶೇಕಡ 15ರಷ್ಟು ಮಧ್ಯಂತರ ಪರಿಹಾರವು ಸೇರಿರುತ್ತದೆ. ಶೇಕಡ 15 ರಷ್ಟು ಮಧ್ಯಂತರ ಪರಿಹಾರ ಸಂದಾಯ ಮಾಡುವುದನ್ನು ದಿನಾಂಕ 1–4–2012 ರಿಂದ ಮುಂದುವರಿಸಲಾಗುವುದಿಲ್ಲ.)

(ii) ಈಗಿನ ಉಪಲಬ್ಧಗಳಿಗೆ ಹಾಗೆ ಸೇರಿಸಿ ಹೆಚ್ಚಿಸಿದ ಆನಂತರ ಈಗಿನ ಮೂಲ ವೇತನವನ್ನು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಈ ಮುಂದಿನಂತೆ ನಿಗದಿಪಡಿಸತಕ್ಕದ್ದು.

(ಎ) ಹಾಗೆ ಮೇಲಿನಂತೆ ಲೆಕ್ಕ ಹಾಕಲಾದ ಒಟ್ಟು ಮೊಬಲಗು ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಟಕ್ಕಿಂತಲೂ ಕಡಿಮೆಯಾದಲ್ಲಿ ವೇತನವನ್ನು ಕನಿಷ್ಟಕ್ಕೆ ನಿಗದಿಪಡಿಸತಕ್ಕದ್ದು.

(ಬಿ) ಮೇಲಿನಂತೆ ಲೆಕ್ಕ ಹಾಕಲಾದ ಮೊಬಲಗು ಕನಿಷ್ಟಕ್ಕಿಂತಲೂ ಕಡಿಮೆ ಇಲ್ಲದಿದ್ದಲ್ಲಿ ಆದರೆ ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಠಕ್ಕಿಂತಲೂ ಕಡಿಮೆಯಾದಲ್ಲಿ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೇಲಿನ ಮೊಬಲಗಿನ ಆನಂತರದ ಹಂತದಲ್ಲಿ ನಿಗದಿಪಡಿಸತಕ್ಕದ್ದು; ಮತ್ತು

(ಸಿ) ಮೇಲಿನಂತೆ ಲೆಕ್ಕ ಹಾಕಲಾದ ಮೊಬಲಗು ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಠಕ್ಕೆ ಸಮನಾಗಿದ್ದಲ್ಲಿ, ಅಥವಾ ಅದಕ್ಕಿಂತಲೂ ಹೆಚ್ಚಾದಲ್ಲಿ, ವೇತನವನ್ನು ಆ ಗರಿಷ್ಠಕ್ಕೆ ನಿಗದಿಪಡಿಸತಕ್ಕದ್ದು ಮತ್ತು ಹೀಗೆ ಲೆಕ್ಕ ಹಾಕಿ ಬಂದ ಮೊತ್ತದ ಆನಂತರದ ಮುಖ್ಯ ಶ್ರೇಣಿಯಲ್ಲಿನ ಹಂತ ಕಂಡಿಕೆ 2.4 ರಲ್ಲಿ ಸೂಚಿಸಿರುವ ಮತ್ತು ಗರಿಷ್ಠ ಹಂತ–ಇವುಗಳ ನಡುವಣ ವ್ಯತ್ಯಾಸದ ಮೊತ್ತವನ್ನು ಆತನ 'ವೈಯಕ್ತಿಕ ವೇತನ' ವೆಂದು ಪರಿಗಣಿಸತಕ್ಕದ್ದು.

ಈ ಉದ್ದೇಶಕ್ಕಾಗಿ 'ಈಗಿನ ಉಪಲಬ್ಧಗಳು' ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

(ಎ) 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 3ರ ಖಂಡ (ಎ) ಯಲ್ಲಿ ವ್ಯಾಖ್ಯಾನಿಸಿದ ಮೂಲ ವೇತನ.

(ಬಿ) ದಿನಾಂಕ 1–1–2012 ರಂದು ಲಭ್ಯವಿರುವ ಮೂಲ ವೇತನದ ಶೇಕಡ 76.75 ರಷ್ಟು ತುಟ್ಟಿಭತ್ಯೆ.

4.2 ಪ್ರಸಕ್ತ ವೇತನ ಶ್ರೇಣಿಯಲ್ಲಿನ ಹಂತಗಳನ್ನು ಮತ್ತು ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ವೇತನವನ್ನು ತೋರಿಸುವ ಹೊಂದಿಕೆ ಕೋಷ್ಟಕವನ್ನು ನಾಲ್ಕನೇ ಅನುಸೂಚಿಯಾಗಿ 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳಿಗೆ ಅನುಬಂಧಿಸಲಾಗಿದೆ.
4.3 ಸರ್ಕಾರಿ ನೌಕರನಿಗೆ ಅನ್ವಯವಾಗುವ ಪರಿಷ್ಕೃತ ಶ್ರೇಣಿಯಲ್ಲಿ ವೇತನವನ್ನು ಪಡೆಯಲು ಅವನು ಆಯ್ಕೆ ಚಲಾಯಿಸುವ ಅಗತ್ಯವಿಲ್ಲ. 1ನೇ ಏಪ್ರಿಲ್ 2012 ರಂದು ಸೇವೆಯಲ್ಲಿದ್ದಂಥ ಪ್ರತಿಯೊಬ್ಬ ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು ಸದರಿ ನಿಯಮಗಳ ನಾಲ್ಕನೇ ಅನುಸೂಚಿಯ 1ನೇ ಅಂಕಣದಲ್ಲಿ ಕಂಡುಬರುವ ಪ್ರಸಕ್ತ ವೇತನ ಶ್ರೇಣಿಯಲ್ಲಿನ ಆತನ ಮೂಲ ವೇತನಕ್ಕೆ ಸಂವಾದಿಯಾಗಿ ಅದರ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಹಂತದಲ್ಲಿ ನಿಗದಿಪಡಿಸತಕ್ಕದ್ದು.

4.4 ವೇತನ ಬಡ್ತಿಯು (ಸ್ಥಗಿತ ವೇತನ ಬಡ್ತಿಯು ಸೇರಿದಂತೆ) 1ನೇ ಏಪ್ರಿಲ್ 2012 ರಿಂದ 31ನೇ ಮಾರ್ಚ್ 2013ರ ವರೆಗಿನ ಅವಧಿಯಲ್ಲಿ ಸಾಮಾನ್ಯ ಕ್ರಮದಲ್ಲಿ ಪ್ರಸಕ್ತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನಿಗೆ ಪ್ರಾಪ್ತವಾಗುವಂತಿದ್ದರೆ, ಅದು ಆತನಿಗೆ ಅನುಕೂಲವಾಗುವಂತಿದ್ದರೆ, ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಆತನ ವೇತನವನ್ನು 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8ರ ಉಪ–ನಿಯಮ (1)ರ ಪರಂತುಕದ ಉಪಬಂಧಗಳಿಗನುಸಾರವಾಗಿ, ಅಂಥ ವೇತನ ಬಡ್ತಿಯು ಪ್ರಾಪ್ತವಾಗುವ ದಿನಾಂಕದಿಂದ ಪುನರ್ ನಿಗದಿಪಡಿಸತಕ್ಕದ್ದು.

4.5 1ನೇ ಏಪ್ರಿಲ್ 2012 ರಂದು ಅಥವಾ ಆನಂತರ ಸೇವೆಗೆ ಸೇರಿರುವ ಅಥವಾ 1ನೇ ಏಪ್ರಿಲ್ 2012 ಕ್ಕೆ ಮೊದಲು ತಾನು ಧಾರಣ ಮಾಡಿರುವ ಹುದ್ದೆಯಲ್ಲದೆ ಇತರ ಯಾವುದೇ ಹುದ್ದೆಗೆ ಮಂಬಡ್ತಿ ಹೊಂದಿರುವ ಅಥವಾ ನೇಮಕ ಹೊಂದಿರುವ ಸರ್ಕಾರಿ ನೌಕರನ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಸಾರವಾಗಿ ನಿಗದಿಪಡಿಸತಕ್ಕದ್ದು. ಅಂಥ ಪ್ರಕರಣಗಳಲ್ಲಿ 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ಮೇರೆಗೆ "ಹೊಂದಿಕೆ ಪ್ರಯೋಜನ" ದೊರೆಯುವುದಿಲ್ಲ.

4.6 ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಮಾಡಿರುವ ವೇತನ ನಿಗದೀಕರಣದ ಕೆಲವು ಉದಾಹರಣೆಗಳನ್ನು ಈ ಆದೇಶದ ಅನುಬಂಧ–I ರಲ್ಲಿ ಕೊಡಲಾಗಿದೆ.

**5. ಪರಿಷ್ಕೃತ ಶ್ರೇಣಿಯಲ್ಲಿ ವೇತನ ಪಡೆಯಲು ಅಧಿಕಾರ ನೀಡಿಕೆ:**

5.1 ಕಛೇರಿಗಳ ಮುಖ್ಯಾಧಿಕಾರಿಗಳು ತಮ್ಮ ನಿಯಂತ್ರಣದಲ್ಲಿರುವ ಸರ್ಕಾರಿ ನೌಕರರ ವೇತನವನ್ನು 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳೊಂದಿಗೆ ಓದಿಕೊಳ್ಳಲಾದ 'ಹೊಂದಿಕೆ ಕೋಷ್ಟಕ'ಕ್ಕೆ ಅನುಸಾರವಾಗಿ ನಿಗದಿಪಡಿಸಲು ಸಕ್ಷಮರಾಗಿರತಕ್ಕದ್ದು.

5.2 ಯಾವ ಸರ್ಕಾರಿ ನೌಕರರ ವೇತನವು ಮಹಾಲೇಖಪಾಲರಿಂದ ಅಧಿಕೃತಗೊಳಿಸಲಾಗುವುದೋ ಆ ಸರ್ಕಾರಿ ನೌಕರರ ಸಂಬಂಧದಲ್ಲಿ ಅವರ ವೇತನವನ್ನು ಮಹಾಲೇಖಪಾಲರು ನಿಗದಿಪಡಿಸತಕ್ಕದ್ದು.

5.3 ಈ ಆದೇಶದ **ಅನುಬಂಧ–II** ರಲ್ಲಿ ಕೊಡಲಾದ ನಮೂನೆಯಲ್ಲಿ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿ ಮಾಡತಕ್ಕದ್ದು. ಈ ನಮೂನೆಯ ಒಂದು ಪ್ರತಿಯನ್ನು ಸರ್ಕಾರಿ ನೌಕರನ ಸೇವಾ ಪುಸ್ತಕದಲ್ಲಿ ಅಂಟಿಸತಕ್ಕದ್ದು; ಒಂದು ಪ್ರತಿಯನ್ನು ಸರ್ಕಾರಿ ನೌಕರನ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪ್ರಥಮ

ಬಾರಿಗೆ ಪಡೆಯುವ ಸಂಬಳದ ಬಿಲ್ಲಿಗೆ ಲಗತ್ತಿಸತಕ್ಕದ್ದು ಮತ್ತು ಒಂದು ಪ್ರತಿಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

5.4 ಸರ್ಕಾರಿ ನೌಕರರ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಬಹಳ ತ್ವರಿತವಾಗಿ ಮತ್ತು 31ನೇ ಜುಲೈ 2012 ರೊಳಗಾಗಿ ನಿಗದಿಪಡಿಸುವಂತೆ ಕಛೇರಿ ಮುಖ್ಯಸ್ಥರು ಖಚಿತಪಡಿಸಿಕೊಳ್ಳಬೇಕು.

**6. ತುಟ್ಟಿ ಭತ್ಯೆ:**

6.1 ಸರ್ಕಾರಿ ನೌಕರರಿಗೆ ಸಂದಾಯವಾಗಬೇಕಾದ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರವು ರೂಪಿಸಿರುವ ತುಟ್ಟಿಭತ್ಯೆಯ ನೀತಿಗೆ ಅನುಗುಣವಾಗಿ ಕ್ರಮಬದ್ಧಗೊಳಿಸತಕ್ಕದ್ದು. ದಿನಾಂಕ 1-1-2012 ರಂದು ಲಭ್ಯವಿರುವ ತುಟ್ಟಿಭತ್ಯೆಯನ್ನು ಪರಿಷ್ಕೃತ ವೇತನ ಶ್ರೇಣಿಗಳ ರಚನೆ ಮಾಡುವಾಗ ಮೂಲವೇತನದಲ್ಲಿ ವಿಲೀನಗೊಳಿಸಿರುವುದರಿಂದ ತುಟ್ಟಿಭತ್ಯೆಯ ಮೊದಲನೆ ಕಂತು ದಿನಾಂಕ 1-7-2012 ರಂದು ಪ್ರಾಪ್ತವಾಗುತ್ತದೆ.

6.2 ತುಟ್ಟಿಭತ್ಯೆಯನ್ನು ಪ್ರತಿವರ್ಷ ಎರಡು ಸಾರಿ ಅಂದರೆ, 1ನೇ ಜನವರಿ ಮತ್ತು 1ನೇ ಜುಲೈ ರಂದು ಪಾವತಿಸತಕ್ಕದ್ದು. ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಸರ್ಕಾರಿ ನೌಕರರಿಗೆ ಸಂದಾಯ ಮಾಡಬೇಕಾದ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರವು ಮಂಜೂರು ಮಾಡುವ ತುಟ್ಟಿಭತ್ಯೆಯ ಪ್ರತಿ ಶೇಕಡಾ 1 ರಷ್ಟು ಹೆಚ್ಚಳಕ್ಕೆ 0.604 ಪರಿವರ್ತಿತ ಅಪವರ್ತ್ಯ ಗುಣಾಕಾರ ಅಂಶದಷ್ಟು (multiplication factor) ಲೆಕ್ಕಾಚಾರ ಮಾಡತಕ್ಕದ್ದು.

6.3 ಹಣದುಬ್ಬರದ ತಟಸ್ಥೀಕರಣ ಎಲ್ಲಾ ಹಂತಗಳಲ್ಲಿ ಶೇಕಡಾ 100ರಷ್ಟು ಏಕರೂಪವಾಗಿರತಕ್ಕದ್ದು.

6.4 ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ಕಾಣಿಸುವುದನ್ನು ಮುಂದುವರಿಸಲಾಗುವುದು.

**7. ಕಾಲಬದ್ಧ ಬಡ್ತಿ/ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ:**

7.1 ಕಾಲಬದ್ಧ ಬಡ್ತಿ/ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆಯ ಈಗಿರುವ ಯೋಜನೆಗಳು ಈ ಮುಂದಿನ ಕಂಡಿಕೆಗಳಲ್ಲಿ ಸೂಚಿಸಿರುವ ಮಾರ್ಪಾಡಿನೊಂದಿಗೆ ಮುಂದಿನ ಆದೇಶಗಳವರೆಗೆ ಜಾರಿಯಲ್ಲಿ ಮುಂದುವರಿಯುವುದು.

7.2 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಿಗೆ ಅನುಸಾರವಾಗಿ ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ ಲಭ್ಯವಾಗುವ ಆಯ್ಕೆ ಕಾಲಿಕ ವೇತನ ಶ್ರೇಣಿಯು ಕೆಳಗೆ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಲಾದಂತೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಎದುರಿಗೆ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಲಾದ ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿಯಾಗಿರತಕ್ಕದ್ದು. ಪರಂತು, ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ ಶ್ರೇಣಿ) ನಿಯಮಗಳು, 2007 ರಲ್ಲಿ ದಿನಾಂಕ 1-7-2005 ರಿಂದ ಜಾರಿಗೆ ಬರುವಂತೆ ಐದು ನೂತನ ವೇತನ ಶ್ರೇಣಿಗಳನ್ನು ಜಾರಿಗೆ ತಂದಿರುವುದರಿಂದ, 1999ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳಡಿ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯನ್ನು ಧಾರಣ ಮಾಡಿರುವ ಒಬ್ಬ ಸರ್ಕಾರಿ ನೌಕರನಿಗೆ ಕಾಲಮಿತಿ ವೇತನ ಬಡ್ತಿಯನ್ನು ದಿನಾಂಕ 01-07-2005ರ ಪೂರ್ವದಲ್ಲಿ 1983ರ ಕರ್ನಾಟಕ

ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಮಂಜೂರು ಮಾಡಿದಲ್ಲಿ, ಅಂತಹ ಆಯ್ಕೆ ಕಾಲಿಕ ವೇತನ ಶ್ರೇಣಿಗೆ ಅನುಗುಣವಾಗಿರುವ ಪರಿಷ್ಕೃತ ವೇತನ ಶ್ರೇಣಿಯನ್ನು ಅವನಿಗೆ ವೈಯಕ್ತಿಕವಾಗಿ ನೀಡತಕ್ಕದ್ದು.

| ಕ್ರಮ ಸಂಖ್ಯೆ | ವೇತನ ಶ್ರೇಣಿ ರೂ. | ಆಯ್ಕೆಕಾಲಿಕ ವೇತನ ಶ್ರೇಣಿ ರೂ. |
|---|---|---|
| 1 | 2 | 3 |
| 1 | 9600–200–12000–250–13000–300–14200–350–14550 | 10400–200–12000–250–13000–300–14200–350–15600–400–16400 |
| 2 | 10400–200–12000–250–13000–300–14200–350–15600–400–16400 | 11000–200–12000–250–13000–300–14200–350–15600–400–17200–450–19000 |
| 3 | 11000–200–12000–250–13000–300–14200–350–15600–400–17200–450–19000 | 11600–200–12000–250–13000–300–14200–350–15600–400–17200–450–19000–500–21000 |
| 4 | 11600–200–12000–250–13000–300–14200–350–15600–400–17200–450–19000–500–21000 | 12500–250–13000–300–14200–350–15600–400–17200–450–19000–500–21000–600–24000 |
| 5 | 12500–250–13000–300–14200–350–15600–400–17200–450–19000–500–21000–600–24000 | 13600–300–14200–350–15600–400–17200–450–19000–500–21000–600–24600–700–26000 |
| 6 | 13600–300–14200–350–15600–400–17200–450–19000–500–21000–600–24600–700–26000 | 14550–350–15600–400–17200–450–19000–500–21000–600–24600–700–26700 |
| 7 | 14550–350–15600–400–17200–450–19000–500–21000–600–24600–700–26700 | 16000–400–17200–450–19000–500–21000–600–24600–700–28800–800–29600 |
| 8 | 16000–400–17200–450–19000–500–21000–600–24600–700–28800–800–29600 | 17650–450–19000–500–21000–600–24600–700–28800–800–32000 |
| 9 | 17650–450–19000–500–21000–600–24600–700–28800–800–32000 | 19000–500–21000–600–24600–700–28800–800–33600–900–34500 |
| 10 | 19000–500–21000–600–24600–700–28800–800–33600–900–34500 | 20000–500–21000–600–24600–700–28800–800–33600–900–36300 |

| | | |
|---|---|---|
| 11 | 20000–500–21000–600–24600–700–28800–800–33600–900–36300 | 21600–600–24600–700–28800–800–33600–900–39000–1050–40050 |
| 12 | 21600–600–24600–700–28800–800–33600–900–39000–1050–40050 | 22800–600–24600–700–28800–800–33600–900–39000–1050–43200 |
| 13 | 22800–600–24600–700–28800–800–33600–900–39000–1050–43200 | 24000–600–24600–700–28800–800–33600–900–39000–1050–45300 |
| 14 | 24000–600–24600–700–28800–800–33600–900–39000–1050–45300 | 26000–700–28800–800–33600–900–39000–1050–45300–1200–47700 |
| 15 | 26000–700–28800–800–33600–900–39000–1050–45300–1200–47700 | 28100–700–28800–800–33600–900–39000–1050–45300–1200–50100 |

7.4 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ, ಒಂದು ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನಿಗೆ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳಿಗೆ ಅನುಸಾರವಾಗಿ, ದೊರೆಯುವ ಹಿರಿಯ ವೇತನ ಶ್ರೇಣಿಯು 1983 ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಮೇರೆಗೆ ಮಂಜೂರು ಮಾಡಿದ ಪರಿಷ್ಕೃತ ಆಯ್ಕೆ ಕಾಲಿಕ ಶ್ರೇಣಿಯ ನಂತರದ ಪರಿಷ್ಕೃತ ವೇತನ ಶ್ರೇಣಿ ಆಗಿರುತ್ತದೆ ಅಥವಾ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವಂತೆ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳಡಿ ಮಂಜೂರಾದ ಪರಿಷ್ಕೃತ ಆಯ್ಕಕಾಲಿಕ ವೇತನ ಶ್ರೇಣಿ ಮತ್ತು ಪದೋನ್ನತಿ ಹುದ್ದೆಯ ವೇತನ ಶ್ರೇಣಿ ಒಂದೇ ಆಗಿದ್ದಲ್ಲಿ ಅಥವಾ ಸರಿಸಮಾನವಾಗಿದ್ದಲ್ಲಿ, ಅಂತಹ ಮುಂಬಡ್ತಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿ ಆಗಿರುತ್ತದೆ.

7.5 1ನೇ ಏಪ್ರಿಲ್ 2012ರ ಪೂರ್ವದಲ್ಲಿ 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳು ಅಥವಾ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಮತ್ತು ಸಂಬಂಧಿಸಿದ ಆದೇಶಗಳಿಗನುಸಾರವಾಗಿ, ಆಯಾ ಪ್ರಕರಣಕ್ಕನುಸಾರವಾಗಿ, ಆಯ್ಕೆ ಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಯನ್ನು ಮಂಜೂರು ಮಾಡಿರುವ ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು 4.1 ರಿಂದ 4.3 ರವರೆಗಿನ ಕಂಡಿಕೆಗಳಲ್ಲಿ ನಮೂದಿಸಿದಂತೆ ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸತಕ್ಕದ್ದು.

7.6 1ನೇ ಏಪ್ರಿಲ್ 2012 ರಂದು ಅಥವಾ ಆನಂತರ, 1983ರ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳ ಅಥವಾ 1991ರ ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ

ಮುಂಬಡ್ತಿ ನೀಡುವಿಕೆ) ನಿಯಮಗಳು ಮತ್ತು ಸಂಬಂಧಿಸಿದ ಆದೇಶಗಳಿಗನುಸಾರವಾಗಿ, ಆಯಾ ನಿಯಮಗಳಿಗನುಸಾರವಾಗಿ, ಆಯ್ಕೆಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಗೆ ಅರ್ಹತೆ ಪಡೆಯುವ ಸರ್ಕಾರಿ ನೌಕರನ ವೇತನವನ್ನು ಸಂಬಂಧಿಸಿದ ನಿಯಮಗಳಲ್ಲಿ ವಿಧಿಸಲಾದಂತೆ ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ ನಿಗದಿಪಡಿಸತಕ್ಕದ್ದು.

## 8. ಮನೆ ಬಾಡಿಗೆ ಭತ್ಯೆ / ನಗರ ಪರಿಹಾರ ಭತ್ಯೆ:

ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ ನಗರಗಳು/ಪಟ್ಟಣಗಳು ಮತ್ತು ಇತರ ಪ್ರದೇಶಗಳನ್ನು 2001ರ ಜನಗಣತಿಯ ಆಧಾರದ ಮೇಲೆ ಪುನರ್ ವರ್ಗೀಕರಿಸಲಾಗಿದೆ ಹಾಗೂ ಹಾಲಿ ಜಾರಿಯಲ್ಲಿರುವ ವರ್ಗಗಳನ್ನು ಆರರಿಂದ ನಾಲ್ಕು ವರ್ಗಗಳಿಗೆ ಇಳಿಸಲಾಗಿದೆ. ದಿನಾಂಕ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ಮನೆ ಬಾಡಿಗೆ ಭತ್ಯೆಯ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| **ಜನಸಂಖ್ಯೆ** | **ವರ್ಗೀಕರಣ** | **ಮನೆ ಬಾಡಿಗೆ ಭತ್ಯೆಯ ದರಗಳು** |
|---|---|---|
| 25 ಲಕ್ಷ ಮತ್ತು ಅದಕ್ಕೂ ಹೆಚ್ಚು | ಎ | ಮೂಲ ವೇತನದ ಶೇ.25 ರಷ್ಟು |
| 5 ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ 25 ಲಕ್ಷ ಮೀರದಂತೆ | ಬಿ | ಮೂಲ ವೇತನದ ಶೇ.16 ರಷ್ಟು |
| 50,000 ಮತ್ತು ಅದಕ್ಕೂ ಹೆಚ್ಚು ಮತ್ತು 5 ಲಕ್ಷ ಮೀರದಂತೆ | ಸಿ | ಮೂಲ ವೇತನದ ಶೇ.10 ರಷ್ಟು |
| 50,000 ಕ್ಕಿಂತ ಕಡಿಮೆ | ಡಿ | ಮೂಲ ವೇತನದ ಶೇ.7 ರಷ್ಟು |

ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ ನಗರಗಳು, ಪಟ್ಟಣಗಳು ಮತ್ತು ಇತರ ಪ್ರದೇಶಗಳನ್ನು ವರ್ಗೀಕರಿಸುವಾಗ ಮಹಾನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳ ಜನಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳತಕ್ಕದ್ದು. ಮನೆ ಬಾಡಿಗೆ ಭತ್ಯೆಯ ನಿರ್ಧಾರಣೆಯ ಉದ್ದೇಶಕ್ಕೆ ಯಾವುದೇ ಪಟ್ಟಣ / ನಗರದ ಜನಸಂಖ್ಯೆಗೆ ಅವುಗಳ ನಗರ ಸಮುಚ್ಚಯ (Urban Agglomeration) /ಔಟ್‌ಗ್ರೋಥ್ (outgrowth) ಪ್ರದೇಶಗಳ ಜನಸಂಖ್ಯೆಯನ್ನು ಸೇರಿಸತಕ್ಕದ್ದಲ್ಲ.

ಯಾವುದೇ ನಿರ್ದಿಷ್ಟ ಮಹಾನಗರಪಾಲಿಕೆ, ನಗರಸಭೆ ಅಥವಾ ಪುರಸಭೆಗಳಿಗೆ ಅನ್ವಯವಾಗುವ ಮನೆ ಬಾಡಿಗೆ ಭತ್ಯೆಯ ದರಗಳನ್ನು ಆಯಾ ಪ್ರದೇಶಗಳ ನಗರ ಸಮುಚ್ಚಯಗಳಿಗೂ ವಿಸ್ತರಿಸತಕ್ಕದ್ದು. ನಗರ ಸಮುಚ್ಚಯಗಳನ್ನೊಳಗೊಂಡಂತೆ ನಗರಗಳು ಮತ್ತು ಪಟ್ಟಣಗಳ ವರ್ಗೀಕರಣವು 2001ರ ಜನಗಣತಿಯ ಮೇಲೆ ಆಧಾರಿತವಾಗಿರುತ್ತದೆ ಮತ್ತು ಅದು ನಗರಾಭಿವೃದ್ಧಿ ಇಲಾಖೆಯು ಅಧಿಸೂಚಿಸಿದಂತಿರುತ್ತದೆ.

ದಿನಾಂಕ 16-1-2007ರ ಅಧಿಸೂಚನೆ ಸಂಖ್ಯೆ: ಯುಡಿಡಿ 92 ಎಂಎನ್‌ವೈ 2006 ರಲ್ಲಿ ರಚಿಸಲಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜನಸಂಖ್ಯೆಯು 25 ಲಕ್ಷಗಳನ್ನು ಮೀರಿರುವುದರಿಂದ, ಅದನ್ನು 'ಎ' ವರ್ಗ ಎಂದು ವರ್ಗೀಕರಿಸಲಾಗಿದೆ.

**9. ನಗರ ಪರಿಹಾರ ಭತ್ಯೆ:**

ನಗರಗಳು/ಪಟ್ಟಣಗಳು ಮತ್ತು ಇತರೆ ಪ್ರದೇಶಗಳಿಗೆ ಅನ್ವಯಿಸುವ ನಗರ ಪರಿಹಾರ ಭತ್ಯೆಯ ಪರಿಷ್ಕೃತ ದರಗಳು ಈ ಕೆಳಗಿನಂತಿರತಕ್ಕದ್ದು.

| ನಗರ/ಇತರ ಸ್ಥಳಗಳು | ಸರ್ಕಾರಿ ನೌಕರನು ಸೇರಿದ ಗುಂಪು | ನಗರ ಪರಿಹಾರ ಭತ್ಯೆಯ ದರ |
|---|---|---|
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಸಿ & ಡಿ<br>ಎ & ಬಿ | ರೂ.350<br>ರೂ.400 |
| ಬೆಳಗಾಂ (ಯು.ಎ.)<br>ಹುಬ್ಬಳ್ಳಿ-ಧಾರವಾಡ<br>ಮಂಗಳೂರು (ಯು.ಎ.)<br>ಮೈಸೂರು (ಯು.ಎ.) | ಸಿ & ಡಿ<br>ಎ & ಬಿ | ರೂ.250<br>ರೂ.300 |

**10. ಗ್ರಾಮೀಣ ಭತ್ಯೆ:**

25,000 ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರುಗಳಿಗೆ ನೀಡಲಾಗುತ್ತಿರುವ ಮಾಸಿಕ ರೂ.100/-ಗಳ ಗ್ರಾಮೀಣ ಭತ್ಯೆಯನ್ನು ದಿನಾಂಕ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ನಿಲ್ಲಿಸಲಾಗಿದೆ.

**11. ಇತರ ವಿಷಯಗಳು:**

11.1 1958ರ ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮೆ) ನಿಯಮಗಳ ಮೇರೆಗೆ ವಿಮಾ ಕಂತಿನ ಕನಿಷ್ಠ ದರಗಳನ್ನು, ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಮತ್ತು ಗರಿಷ್ಠ ವೇತನದ ಮಧ್ಯಮಾಂಕದ ಶೇಕಡಾ ಆರೂ ಕಾಲು (ಶೇ. 6¼) ಆಗಿರುವಂತೆ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ.

11.2 ಪ್ರಯಾಣ ಭತ್ಯೆಯ ಪರಿಷ್ಕರಣೆ, ಅರ್ಹತೆ, ಇತರೆ ಭತ್ಯೆಗಳು ಮತ್ತು ಸೌಲಭ್ಯಗಳು ಇತ್ಯಾದಿಗಳ ಕುರಿತು ಆದೇಶಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

11.3 ಈ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ಸಮಸ್ಯೆಗಳಿದ್ದರೆ ಅಥವಾ ಯಾವುದೇ ಸಂದೇಹಗಳಿಗೆ ಸ್ಪಷ್ಟೀಕರಣದ ಅವಶ್ಯಕತೆ ಕಂಡು ಬಂದರೆ, ಅವುಗಳನ್ನು ಸರ್ಕಾರದ ಹಣಕಾಸು ಇಲಾಖೆಗೆ ಕಳುಹಿಸಿಕೊಡಬಹುದು.

**12. ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗೆ ಮತ್ತು ಸ್ಥಳೀಯ ಸಂಸ್ಥೆಗಳ (ಪಟ್ಟಣ) ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಗಳ ಪ್ರಯೋಜನಗಳ ವಿಸ್ತರಣೆ:**

**12.1** ಈ ಕುರಿತು ಆದೇಶಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ಪ್ರತ್ಯೇಕವಾಗಿ ಹೊರಡಿಸುತ್ತವೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**



**(ಸುಂದರ ರಾಜ ಗುಪ್ತ)**
**ಸರ್ಕಾರದ ಉಪ ಕಾರ್ಯದರ್ಶಿ**
**ಆರ್ಥಿಕ ಇಲಾಖೆ (ಸೇವೆಗಳು–2)**

**ಸರ್ಕಾರಿ ಆದೇಶ ಸಂಖ್ಯೆ: ಆಇ 7 ಎಸ್‌ಆರ್‌ಪಿ 2012, ದಿನಾಂಕ 21ನೇ ಏಪ್ರಿಲ್ 2012 ರ ಅನುಬಂಧ–I**

**ಉದಾಹರಣೆ – 1**

**ವಿವರಗಳು**

| | |
|---|---|
| 1. 2012ನೇ ಏಪ್ರಿಲ್ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಪ್ರಥಮ ದರ್ಜೆ ಸಹಾಯಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.7275–175–7800–200–8600–225–9500–250–10500–300–12300–350–13350 |
| 3. 2012ನೇ ಏಪ್ರಿಲ್ 1ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ. 11,100/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2012 |

**ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.14550–350–15600–400–17200–450–19000–500–21000–600–24600–700–26700 |
| 2. 2012ನೇ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.22,200/– |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2012ರ ಜುಲೈ 1 ರಂದು ಲಭ್ಯವಿದ್ದ ವೇತನ ಬಡ್ತಿಯನ್ನು (ರೂ.11,400/–) ಆಧರಿಸಿ 2012ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ ಪುನರ್ ನಿಗದಿ ಪಡಿಸಬೇಕಾದ ವೇತನ | ರೂ.22,800/– |
| 4. 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(2) ರನ್ವಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2013 |

## ಉದಾಹರಣೆ – 2

### ವಿವರಗಳು

| | |
|---|---|
| 1. 2012ನೇ ಏಪ್ರಿಲ್ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಅಧೀಕ್ಷಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.10000–250–10500–300–12300–350–14400–400–16800–450–18150 |
| 3. 2012ನೇ ಏಪ್ರಿಲ್ 1ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.14,050/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2012 |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.20000–500–21000–600–24600–700–28800–800–33600–900–36300 |
| 2. 2012ನೇ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.28,100/– |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1) ರನ್ವಯ | 1ನೇ ಜುಲೈ 2012 |

**ಉದಾಹರಣೆ – 3**

**ವಿವರಗಳು**

| | |
|---|---|
| 1. 2012ನೇ ಏಪ್ರಿಲ್ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಕಿರಿಯ ಅಭಿಯಂತರರು (ಲೋಕೋಪಯೋಗಿ ಇಲಾಖೆ) |
| 2. ಪ್ರಸಕ್ತ ವೇತನ ಶ್ರೇಣಿ | ರೂ.8825–225–9500–250–10500–300–12300–350–14400–400–16000 |
| 3. 2011ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಕಾಲಬದ್ಧ ಬಡ್ತಿ ಯೋಜನೆ ಮೇರೆಗೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.9500–250–10500–300–12300–350–14400–400–16800–450–17250 |
| 4. 2012ನೇ ಏಪ್ರಿಲ್ 1 ರಂದು ಇದ್ದಂತೆ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಪಡೆದ ಮೂಲ ವೇತನ | ರೂ.12,650/– |
| 5. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಮೇ 2012 |

**ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.17650–450–19000–500–21000–600–24600–700–28800–800–32000 |
| 2. ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.19000–500–21000–600–24600–700–28800–800–33600–900–34500 |
| 3. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ವೇತನ | ರೂ.25,300/– |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2012 ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1) ರನ್ವಯ | 1ನೇ ಮೇ 2012 |

**ಉದಾಹರಣೆ – 4**

**ವಿವರಗಳು**

| | |
|---|---|
| 1. 2012ನೇ ಏಪ್ರಿಲ್ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | **ಸಹಾಯಕ ಅಭಿಯಂತರು** (ಲೋಕೋಪಯೋಗಿ ಇಲಾಖೆ) |
| 2. ಪ್ರಸಕ್ತ ವೇತನ ಶ್ರೇಣಿ | ರೂ.11400–300–12300–350–14400–400–16800–450–19500–525–21600 |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.19,050/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1 ನೇ ಸೆಪ್ಟೆಂಬರ್ 2012 |

**ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.22800–600–24600–700–28800–800–33600–900–39000–1050–43200 |
| 2. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.38,100/– |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2012ನೇ ಸೆಪ್ಟೆಂಬರ್ 1 ರಂದು ಲಭ್ಯವಿದ್ದ ವೇತನ ಬಡ್ತಿಯನ್ನು (ರೂ.19,500/–) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.39,000/– |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(2)ರನ್ವಯ | 1ನೇ ಸೆಪ್ಟೆಂಬರ್ 2013 |

## ಉದಾಹರಣೆ – 5

### ವಿವರಗಳು

| | |
|---|---|
| 1. 2012ನೇ ಏಪ್ರಿಲ್ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ಪಶುವೈದ್ಯಾಧಿಕಾರಿ |
| 2. ಪ್ರಸಕ್ತ ವೇತನ ಶ್ರೇಣಿ | ರೂ.13000–350–14400–400–16800–450–19500–525–22650–600–23850 |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.23,850+600 ವೈಯಕ್ತಿಕ ವೇತನ (1ನೇ ಸ್ಥಗಿತ ವೇತನ ಬಡ್ತಿ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 2013ರ ಜನವರಿ 1 ರಂದು 2ನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.26000–700–28800–800–33600–900–39000–1050–45300–1200–47700 |
| 2. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.47,700+1200 ವೈಯಕ್ತಿಕ ವೇತನ |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2013ನೇ ಜನವರಿ 1 ರಂದು ಲಭ್ಯವಿದ್ದ 2ನೇ ಸ್ಥಗಿತ ವೇತನ ಬಡ್ತಿಯನ್ನು ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ಮೂಲ ವೇತನ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.47,700+2400 ವೈಯಕ್ತಿಕ ವೇತನ |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 2014ರ ಜನವರಿ 1 ರಂದು 3ನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

**ಉದಾಹರಣೆ – 6**

**ವಿವರಗಳು**

| | |
|---|---|
| 1. 2012ನೇ ಏಪ್ರಿಲ್ 1ನೇಯ ದಿನಾಂಕದಂದು ಧಾರಣ ಮಾಡಿದ ಹುದ್ದೆಯ ಪದನಾಮ | ವಾಹನ ಚಾಲಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.5800–100–6000–125–6500–150–7100–175–7800–200–8600–225–9500–250–10500 |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆದ ಮೂಲ ವೇತನ | ರೂ.10,500 (ದಿನಾಂಕ:1–03–2012ರಂದು ವೇತನ ಶ್ರೇಣಿಯ ಗರಿಷ್ಟ ಹಂತ ತಲುಪಿರುತ್ತಾರೆ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 1–3–2013 ರಂದು ಮೊದಲನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

**ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.11600–200–12000–250–1300–300–14200–350–15600–400–17200–450–19000–500–21000 |
| 2. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.21,000 |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2013ನೇ ಮಾರ್ಚ್ 1 ರಂದು ಲಭ್ಯವಿದ್ದ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು (ರೂ.10,500 +250) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.21,000+600 ವೈಯಕ್ತಿಕ ವೇತನ |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ಆದರೆ, 1–3–2014 ರಂದು 2ನೇ ಸ್ಥಗಿತ ವೇತನ ಬಡ್ತಿಗೆ ಅರ್ಹತೆ ಇದೆ. |

**ಉದಾಹರಣೆ – 7**

**ವಿವರಗಳು**

| | |
|---|---|
| 1. 2012ನೇ ಏಪ್ರಿಲ್ 1ರಂದು ಧಾರಣ ಮಾಡಿದ ಹುದ್ದೆಯ ಪದನಾಮ | ಆಡಳಿತಾಧಿಕಾರಿ |
| 2. ಪ್ರಸಕ್ತ ವೇತನ ಶ್ರೇಣಿ | 2007ರ ವೇತನ ಶ್ರೇಣಿ ರೂ.10800–300–12300–350–14400–400–16800–450–19500–525–20025 ರಲ್ಲಿ ದಿನಾಂಕ: 1–4–2012 ರಂದು ನೇಮಕಗೊಂಡಿರುತ್ತಾರೆ |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನ | ರೂ.10,800/– |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1 ನೇ ಏಪ್ರಿಲ್ 2013 |

**ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.21600–600–24600–700–28800–800–33600–900–39000–1050–40050 |
| 2. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.21,600/– |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1 ನೇ ಏಪ್ರಿಲ್ 2013 |

## ಉದಾಹರಣೆ – 8

### ವಿವರಗಳು

| | |
|---|---|
| 1. 2012ನೇ ಏಪ್ರಿಲ್1 ರಂದು ಧಾರಣ ಮಾಡಿದ ಹುದ್ದೆಯ ಪದನಾಮ | ಉಪ ಕಾರ್ಯದರ್ಶಿ |
| 2. ಪ್ರಸಕ್ತ ವೇತನ ಶ್ರೇಣಿ | ರೂ.20025–525–22650–600–26250–675–28275 |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಮೂಲ ವೇತನ | ರೂ.28,275 |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ದಿನಾಂಕ 1–1–2013 ರಂದು ಮೊದಲನೇ ಸ್ಥಗಿತ ವೇತನ ಬಡ್ತಿ ಲಭ್ಯವಿರುತ್ತದೆ. |

### ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.40050–1050–45300–1200–52500–1350–56550 |
| 2. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.56,550/– |
| 3. ಪ್ರಸಕ್ತ ವೇತನ ಶ್ರೇಣಿಯಲ್ಲಿ 2013ನೇ ಜನವರಿ 1 ರಂದು ಲಭ್ಯವಿದ್ದ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು (ರೂ.28275+675) ಆಧರಿಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.56,550+1350 ವೈಯಕ್ತಿಕ ವೇತನ |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(2)ರನ್ವಯ | 1ನೇ ಜನವರಿ 2014 |

**ಉದಾಹರಣೆ – 9**

**ವಿವರಗಳು**

| | |
|---|---|
| 1. 2012ನೇ ಏಪ್ರಿಲ್ 1 ರಂದು ಧಾರಣ ಮಾಡಿದ ಹುದ್ದೆಯ ಪದನಾಮ | ಕೃಷಿ ನಿರ್ದೇಶಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.26250–675–30300–750–34800–850–36500 |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.36500+850 ವೈಯಕ್ತಿಕ ವೇತನ (ಮೊದಲನೇ ಸ್ಥಗಿತ ವೇತನ ಬಡ್ತಿ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಯಾವುದೇ ವೇತನ ಬಡ್ತಿ ಇಲ್ಲ. ದಿನಾಂಕ 1–4–2013 ರಂದು ಎರಡನೇ ಸ್ಥಗಿತ ವೇತನ ಬಡ್ತಿ ಲಭ್ಯವಿರುತ್ತದೆ. |

**ಪರಿಷ್ಕೃತ ಶ್ರೇಣಿಯಲ್ಲಿ ವೇತನ ನಿಗದಿ**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.52500–1350–60600–1500–69600–1700–73000 |
| 2. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.73000+1700 ವೈಯಕ್ತಿಕ ವೇತನ |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 2013ನೇ ಏಪ್ರಿಲ್ 1 ರಂದು 2ನೇ ಸ್ಥಗಿತ ವೇತನ ಬಡ್ತಿ ಲಭ್ಯವಿರುತ್ತದೆ |

## ಉದಾಹರಣೆ – 10

## ವಿವರಗಳು

2007ರ ವೇತನ ಶ್ರೇಣಿ ರೂ.11400–300–12300–350–14400–400–16800–450–19500–525–21600 ರಲ್ಲಿ ರೂ.**19,500/–** ಮೂಲ ವೇತನ ಪಡೆಯುತ್ತಿದ್ದ ಶ್ರೀಮತಿ "ಎ" **ಶಾಖಾಧಿಕಾರಿಯವರಿಗೆ** 2007 ವೇತನ ಶ್ರೇಣಿ ರೂ.14050–350–14400–400–16800–450–19500–525–22650–600–25050 ರಲ್ಲಿ 2012ನೇ ಫೆಬ್ರವರಿ 1 ರಿಂದ ಜಾರಿಗೆ ಬರುವಂತೆ **ಅಧೀನ ಕಾರ್ಯದರ್ಶಿ** ಹುದ್ದೆಗೆ ಬಡ್ತಿ ನೀಡಲಾಯಿತು. ಬಡ್ತಿ ನೀಡಿದ ಮೇಲೆ ಅವರ ವೇತನವನ್ನು 2012ನೇ ಫೆಬ್ರವರಿ 1 ರಿಂದ ರೂ.**20,025/–**ಕ್ಕೆ ನಿಗದಿಪಡಿಸಲಾಯಿತು. ಅವರ ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಯಲ್ಲಿ ಅವರ ಮುಂದಿನ ವೇತನ ಬಡ್ತಿ 2013ರ ಜನವರಿ ಒಂದರಂದು ದೊರೆಯಬೇಕಾಗಿತ್ತು.

| | |
|---|---|
| 1. 2012ನೇ ಏಪ್ರಿಲ್ 1 ರಂದು ಧಾರಣ ಮಾಡಿದ್ದ ಹುದ್ದೆಯ ಪದನಾಮ | **ಅಧೀನ ಕಾರ್ಯದರ್ಶಿ** |
| 2. 2012ನೇ ಏಪ್ರಿಲ್ 1 ರಂದು ಧಾರಣ ಮಾಡಿದ್ದ ಹುದ್ದೆಗೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿ | ರೂ.14050–350–14400–400–16800–450–19500–525–22650–600–25050 |
| 3. 2012ನೇ ಏಪ್ರಿಲ್ 1 ರಂದು ಇದ್ದಂತೆ ಅಧೀನ ಕಾರ್ಯದರ್ಶಿ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.**20,025** |
| 4. 2012ನೇ ಏಪ್ರಿಲ್ 1 ರಂದು ಧಾರಣ ಮಾಡಿದ್ದ ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.28100–700–28800–800–33600–900–39000–1050–45300–1200–50100 |
| 5. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.40,050 |
| 6. 2012ನೇ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ರೂ.19,500 ಮೂಲ ವೇತನವನ್ನು ಆಧರಿಸಿ ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ ರೂ.22800–600–24600–700–28800–800–33600–900–39000–1050–43200ರಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.39,000 |
| 7. ಪ್ರಸಕ್ತ ವೇತನ ಶ್ರೇಣಿಯಲ್ಲಿ 2013ನೇ ಜನವರಿ 1 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು | |

| | |
|---|---|
| (ರೂ.20,025) ಆಧರಿಸಿ, ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – 2012ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 8(1)ರ ಪರಂತುಕದನ್ವಯ | ರೂ.40,050/– |
| 8. ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಯಲ್ಲಿ 2013ನೇ ಜನವರಿ 1 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಆಧರಿಸಿ ಅಧೀನ ಕಾರ್ಯದರ್ಶಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನರ್ ನಿಗದಿಪಡಿಸಬೇಕಾದ ವೇತನ – ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 42ಬಿ(2) ರನ್ವಯ | ರೂ.41,100 |
| 9. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿ | 1ನೇ ಜನವರಿ 2014 |



**(ಸುಂದರ ರಾಜ ಗುಪ್ತ)**
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2)

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 07 ಎಸ್‌ಆರ್‌ಪಿ 2012 ದಿನಾಂಕ 21ನೇ ಏಪ್ರಿಲ್ 2012 ರ ಅನುಬಂಧ – II**

**ನಮೂನೆ**

| ಸರ್ಕಾರಿ ನೌಕರನ ಹೆಸರು ಮತ್ತು 1–4–2012 ರಂದು ಧಾರಣ ಮಾಡಿದ್ದ ಹುದ್ದೆ | 1–4–2012 ರಂದು ಧಾರಣ ಮಾಡಿರುವ ಹುದ್ದೆಯ ಈಗಿನ ವೇತನ ಶ್ರೇಣಿ | 1–4–2012 ರಂದು ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ವೇತನ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ಹುದ್ದೆಗೆ ಅನ್ವಯ–ವಾಗುವ ಪರಿಷ್ಕೃತ ವೇತನ ಶ್ರೇಣಿ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನಕ್ಕೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ | 8(1) ನೇ ನಿಯಮದ ಪರಂತುಕದ ಮೇರೆಗೆ ವೇತನ ಪುನರ್ ನಿಗದಿಯು ಪ್ರಯೋಜನಕಾರಿಯೇ? ಮತ್ತು, ಹಾಗಿದ್ದರೆ, ಪುನರ್ ನಿಗದಿಪಡಿಸಿದ ವೇತನ ಮತ್ತು ಅಂತಹ ಪುನರ್ ನಿಗದಿಯ ದಿನಾಂಕ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿ ದಿನಾಂಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ಟಿಪ್ಪಣಿ: ಸರ್ಕಾರಿ ನೌಕರನ ಪ್ರಾರಂಭಿಕ ವೇತನವನ್ನು –

(ಅ) ಅವನು ದಿನಾಂಕ 1ನೇ ಏಪ್ರಿಲ್ 2012 ರಂದು ಧಾರಣ ಮಾಡಿದ್ದ ಹುದ್ದೆಯ ಸಂಬಂಧದಲ್ಲಿ; ಮತ್ತು

(ಆ) ಅವನು ಉನ್ನತ ಹುದ್ದೆಯನ್ನು ಸ್ಥಾನಪನ್ನವಾಗಿ ಧಾರಣ ಮಾಡಿರದ ಪಕ್ಷದಲ್ಲಿ ಆ ದಿನಾಂಕದಂದು ಅವನು ಧಾರಣ ಮಾಡಿರಬಹುದಾದಂಥ ಕೆಳಗಿನ ಹುದ್ದೆ, ಯಾವುದಾದರೂ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಿಗದಿಪಡಿಸತಕ್ಕದ್ದು.

ಸರ್ಕಾರಿ ಆದೇಶದ 5ನೇ ಪ್ಯಾರಾದಲ್ಲಿ
ನಮೂದಿಸಿದ ಪ್ರಾಧಿಕಾರದ ಸಹಿ.
ಪದನಾಮ
ದಿನಾಂಕ



(ಸುಂದರ ರಾಜ ಗುಪ್ತ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು–2)